ನೋಡಪ್ಪ, ನೀನು ನನಗೆ ಆತ್ಮೀಯನಾಗಿದ್ದವನು. ಅದಕ್ಕೆ ನಮ್ಮಿಬ್ಬರ ಒಳ್ಳೆಯದಕ್ಕೇ ಹೇಳ್ತಿರೋದು, ನಾನೂ ಬದುಕಬೇಕಲ್ಲ? ಹಾಗಾಗಿ, ನೀನಿನ್ನು ನನ್ನ ಜೊತೆ ಬರುವಂತಿಲ್ಲ. ಈ ಊರಲ್ಲಿ ಸುದ್ದಿ ವೇಗವಾಗಿ ಚಲಿಸುತ್ತೆ. ನೀನು ನಂಬುತ್ತೀಯೋ ಇಲ್ಲವೋ, ನೀನು ಹೋಟೆಲಿನಲ್ಲಿ ಇಡ್ಲಿ ತಿನ್ನುವ ಚಿತ್ರ ವ್ಯಾಟ್ಸ್‌ಆ್ಯಪಿನಲ್ಲಿ ಈಗಾಗಲೆ ಹರಿದಾಡಿ ಆಗಿದೆ. ಮಗಳು ತೋರಿಸಿದಳು. ಟೀವಿಯಲ್ಲಿ ನೀನು ಬಹುಮಾನ ತಗೊಂಡಿದ್ದನ್ನು ನನಗೆ ಮಗಳೇ ಹೇಳಿದಳು. ಆದರೆ, ಬೆಳಕಿಗಿಂತ ವೇಗವಾಗಿ ಸುದ್ದಿ ಹರಡುವ ಈ ಊರಿಗೆ ಬೆಳಕೆಂಬುದು ಏನೆಂದು ತಿಳಿದಿಲ್ಲ. ಬೇಕಾಗಿಯೂ ಇಲ್ಲ. ಕತ್ತಲೆ ಗೊತ್ತು. ಅದು ಬೇಕು. ಜೈಲಿನಲ್ಲಿದ್ದವನು ಎನ್ನುವ ವಿಷಯ, ಕೊಲೆಗಾರ ಎನ್ನುವ ವಿಷಯ ಸದಾಕಾಲ ಬಿಸಿಯಾಗುಳಿದು ಉಳಿದೆಲ್ಲ ಗೌಣವಾಗಿಯೇ ಬಿಡುತ್ತೆ. ನೋಡು, ಇಂಥ ಊರಲ್ಲಿ ಹೇಗೆ ಜೀವನ ಸಾಗಿಸ್ತಿ ಅನ್ನೋದು ನಿನಗೇ ಬಿಟ್ಟದ್ದು...'

ಮುತ್ತಂಜಿ ಭಟ್ಟರ ಮಾತನ್ನ ಕೇಳಿದ ಆತ ಒಂದೇ ಪ್ರಶ್ನೆಯಿಟ್ಟ:

'ನನ್ನ ಮನೆ ಇದೆಯಾ ಭಟ್ಟರೆ?'

'ಇದೆಯಪ್ಪ, ಅದರ ಒಳಗೆ ಹೋಗಲು ಮನುಷ್ಯರು ಧೈರ್ಯ ಮಾಡಬೇಕೆಂದರೆ ಅದು ಕುಡಿದವರು ಮಾತ್ರವೇನೋ' ಎಂದೊಂದು ಬಗೆ ನಕ್ಕರು. ಆತ ಮತ್ತೇನೂ ಮಾತಾಡದೆ ಹೊರಬಿದ್ದ.

★★★

ಅಂದು ಆತ ಹೊರಡುವಂದು ಮೈತುಂಬ ಕೆಂಪು ಹೂ ತುಂಬಿಕೊಂಡಿದ್ದ ಮನೆಯೆದುರಿಗಿನ ಮೇಫ್ಲವರ್ ಮರ ಇವತ್ತು ಧರಾಶಾಹಿಯಾಗಿತ್ತು. ಹಿತ್ತಲಬೇಲಿ ಮುರಿದು ಬಿದ್ದು ಹೂಗಿಡಗಳು ದನಕುರಿಗಳ ಪಾಲಾಗಿ ಬರಿದೆ ಮುಳ್ಳು ಪೊದೆಗಳು ಹಸಿರಾಗಿ ತುಂಬಿಕೊಂಡಿದ್ದವು. ಒಳಗೆ ಕಾಲಿಡುತ್ತಿದ್ದಂತೆ ಆ ಹಸಿರುಮುಳ್ಳುಗಳ ಸೆರಗಿನಡಿ ಬೂದು ಬಣ್ಣದ ಕೇರೆಹಾವೊಂದು ಹರಿದುಹೋಯಿತು. ಗಮನಿಸದೆ ತನ್ನ ಪಾಡಿಗೆ ತಾನು ಬಾಗಿಲಿಲ್ಲದ ಮನೆಯ ಒಳಹೊಕ್ಕವನಿಗೆ ಮುಸುಕು ಬೆಳಕಲ್ಲಿ ಕಂಡದ್ದು ಕುರಿ ಹಿಕ್ಕೆಗಳು, ಮೂಲೆಯಲ್ಲಿ ತೂರಾಡಿದ ಬಾಟಲಿಗಳು, ಕೆಳಗೆ ಹರಡಿದ್ದಲ್ಲದೆ ಗೋಡೆಗೂ ಮೆತ್ತಿದ ಸಗಣಿ. ಜಗುಲಿಯ ಗಲೀಜಿಗೆ ಯಾವ ಭಾವವನ್ನು ವ್ಯಕ್ತಪಡಿಸದೆ ಒಳಮನೆಗೆ ಹೊಕ್ಕ. ಅದು ಸ್ವಲ್ಪ ಕ್ಲೀನಾಗಿದ್ದಂತೆ ಕಂಡಿತು. ಯಾರೋ ಗುಡಿಸಿ ಈಚಲಚಾಪೆ ಹಾಸಿಟ್ಟಿದ್ದರು. ಮೂಲೆಯಲ್ಲಿ ಬಿದ್ದ ಕೆಲವು ಇಸ್ಪೀಟು ಎಲೆಗಳು, ಹೊಡೆಯುತ್ತಿರುವ ಒಂದು ರೀತಿಯ ಕಮಟುಗಬ್ಬು ವಾಸನೆ ಅಲ್ಲಿ ನಡೆಯುತ್ತಿದ್ದುದಕ್ಕೆ ಸಾಕ್ಷಿ ಹೇಳುತ್ತಿದ್ದವು. ಮಣ್ಣುದುರುತ್ತಿದ್ದ ಗೋಡೆಗೆ ಬಾಗಿದಂತೆ ತೂಗುಬಿದ್ದ ಗಿಳಿಗೂಟದಲ್ಲಿದ್ದ ಬಗ್ಗೋಣ ಪಂಚಾಂಗವನ್ನ ಇರುವೆಗಳು ಮುಕ್ಕಾಲು ಭಾಗ ತಿಂದುಹಾಕಿದ್ದವು. ಮತ್ತೊಂದು ಮೂಲೆಯಲ್ಲಿ ಮೊಳೆಗೆ ತೂಗುಹಾಕಿದ ಬಿದಿರಿನ ಏಕತಾರಿ, ಅದಕ್ಕಿದ್ದ ಕರಟದ ಬುರುಡೆ, ಕಟ್ಟಿದ ಉಡದ ಚರ್ಮ ಎಲ್ಲ ಲಡ್ಡುಹಿಡಿದು ಉದುರಿ ಬಿಳಿ ಕಪ್ಪು ಬಣ್ಣದ ಹುಡಿ ನೆಲದ ತುಂಬ ಹರಡಿತ್ತು. ಅವಳು ಅಡ್ಡ ಬಿದ್ದಿದ್ದ ಮೂಲೆಯನ್ನೊಮ್ಮೆ ನೋಡಿದ. ಅದರ ಬಳಿಯೇ ಕಿಟಕಿ ದೊಡ್ಡದಾಗಿ ತೆರೆದುಕೊಂಡಿತ್ತು. ಎಲ್ಲ ಜಗಜ್ಜಾಹೀರೇ ಆದ ಬಳಿಕ ಕಿಟಕಿ ತೆರೆದೇ ಇರಬೇಕಲ್ಲ ಎನ್ನಿಸಿತಾದರೂ ಮತ್ತೆ ಅಂದಿನ ಕರಾಳ ಸಂಜೆಯ ನೆನಪು ಹಾದು ಹೋಗುತ್ತಿದ್ದಂತೆ ಥಟ್ಟನೆ ನೆನಪಾಯಿತು – ತಾನು ಊರ ಹೊರಬಾಗಿಲ ಬಳಿ ಕಂಡ ಫೋಟೊ. ಬೀಸಿದ ಕುಡುಗೋಲು ಸಮಾ ತಾಗಿದ್ದರೆ ಪ್ರಾಯಶಃ ಮರಣದಂಡನೆಯೆ ಆಗುತ್ತಿತ್ತೇನೋ. ಆಗಲಿಲ್ಲ ಅಂತಾದರೆ... ತಾನು ಉಳಿದದ್ದೇಕೆ ಎನ್ನುವ ಪ್ರಶ್ನೆ ಧುತ್ತೆಂದು ನಿಂತಿತು.

ದೇವರ ಕೋಣೆಯತ್ತ ಇಣುಕಲು ಮನಸ್ಸಾಗಲಿಲ್ಲ. ಅಷ್ಟರಲ್ಲಿ ಗದ್ದಲ ಕೇಳಿಸಿದಂತಾಗಿ ಹೊರಬಂದ. ರಸ್ತೆಯಲ್ಲಿ ಮಕ್ಕಳು ಹೆಂಗಸರಾದಿಯಾಗಿ ಕೇರಿಯವರೆಲ್ಲ ನಿಂತಿದ್ದರು. ಬಹಳ ಜನ ಗುರುತಿನವರೆ. ಮಾತಾಡಿಸುವ ಎಂದು ಅಂಗಳಕ್ಕೆ ಕಾಲಿಡುವಷ್ಟರಲ್ಲಿ ಬಕಾಸುರನನ್ನ ಕಂಡ ಏಕಚಕ್ರನಗರದ ಜನರಂತೆ